## ಫಾರೆಸ್ಟ್ ಇಲಾಖಾ.

## ಇಸ್ತಿಹಾರ್ ನಾಮೆ.

ತಾರೀಖು 21ನೇ ಡಿಶಂಬರ್ 1886.

ಇದರಿಂದ ಪ್ರಕಟಪಡಿಸುವದೇನಂದರೆ, ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟಿನಲ್ಲಿ ಉತ್ಪತ್ತಿಯಾದ ಬಾಬತು, ಯಿದರಡೀಲಿ ಕಂಡ ಚೌಬೀನೆಗಳನ್ನು ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಫಾರೆಸ್ಟ್ ಅಸ್ಟೆಂಟ್ ಕನ್‌ಸರ್‌ವೇಟರ್ ಸಾಹೇಬರವರಿಂದ ಪಬ್ಲಿಕ್ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

| ಹರಾಜ್ ನಡಿಯತಕ್ಕ ಸ್ಥಳ ದಹೆಸರು. | ಹರಾಜು ತಾರೀಖು. | ಸಾಗವಾನಿ ನಾಟಾಗಳು. | ಕಾಡಜಾತಿ ನಾಟಾಗಳು. | ಸಾಗವಾನಿ ಮತ್ತು ಕಾಡಜಾತಿ ಬೆಲಗಗಳು. | ಷರಾ. |
|---|---|---|---|---|---|
| ಶಿರಾಳಕೊಪ್ಪಾ | 15ನೇ ಜನವರೀ 1887 | .. | 80 | 120 | ಹರಾಜ್ ಕಾಲದಲ್ಲಿ ಸರಿಯಾದ ರೇಟ್ ಶಿಕ್ಕರೆ ಜಾಸ್ತಿ ನಾಟಾಗಳನ್ನು ಹರಾಜ್ ಹಾಕಲ್ಪಡುತ್ತದೆ. |
| ಶಿಕಾರಿಪುರ ಡಿಪೊ | 18ನೇ ಡಿಟೋ 1887 | .. | 40 | 210 | |
| ತರಿಕೆರೆ ಡಿಪೊ | 25ನೇ ಡಿಟೋ 1887 | 50 | 20 | 1000 | |
| ಲಕ್ಕವಳ್ಳಿ ಡಿಪೊ | 1ನೇ ಫಿಬ್ರವರೀ 1887 | 650 | 650 | 2000 | |
| ಕಣಬೂರ್ ಡಿಪೊ ತಾಲ್ಲೂಕು ಕೊಪ್ಪಾ | 5ನೇ ಫಿಬ್ರವರೀ 1887 | 500 | 200 | 30 | |
| ಆಯನೂರು ಡಿಪೊ ಶಿವಮೊಗ್ಗಾ ತಾಲ್ಲೂಕು | 15ನೇ ಡಿಟೋ 1887 | 100 | .. | .. | |

ಹರಾಜಿನ ಷರತುಗಳು—ಮೈಸೂರು ಗೆಜಟ್‌ನಲ್ಲಿ 1873ನೇ ಇಸವಿ ಜೂನ್ 2ನೇ ಮರ್ಕುಂ ನಂಬರು 20ನೇ ಯಿಸ್ತಿಹಾರ್‌ನಾಮೆಯಲ್ಲಿ ಪ್ರಕಟಿಸಲ್ಪಟ್ಟ ಪ್ರಕಾರ ಯಿರತಕ್ಕದ್ದು. ಮತ್ತು ಹರಾಜಕಾಲದಲ್ಲಿ ವೋದಲ್ಪಡುವದು.

ಯಲ್. ರಿಕ್ಕೆಟ್‌ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್‌ಸ್.

---

## ಬೆಂಗಳೂರು ಡಿಸ್ಟ್ರಿಕ್ಟು.

## ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1886ನೇ ಇಸವಿ ಮಿಸಲೇನಿಯಸ್ ನಂಬರ್ 916.

ಅರ್ಜೀದಾರ್ ಬೆಂಗಳೂರು ಕಲಾಸಿಪಾಳ್ಯದಲ್ಲಿ ಯಿರುವ ಕಂಜಿಲೇಟು ಆದಿ ನಾರಾಯಣಸಾಮಿನಾಯಡರ ಹೆಂಡತಿ ತಾಯೋರಂಮ.

ಪ್ರತಿವಾದಿ ಬೆಂಗಳೂರು ಕಲಾಸಿಪಾಳ್ಯದಲ್ಲಿ ಯಿರುವ ಕಂಜಿ ಮುತ್ತಸಾಮಿನಾಯಡರ ಮಗ ಮುನಿಸಾಮಿನಾಯಡು.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೇಲ್ಕಂಡ ಮೊಕದ್ದಮೆಯಲ್ಲಿ ಅರ್ಜೀದಾರಳು ಮೆನಲ್ ಜಾನ ಕೇಶವಲ್‌ನಾಯಡುರ ಜಿಂದಗಿಗೆ ತಂನನ್ನ ಮ್ಯಾನೇಜರಾಗಿ ನೇಮಿಸಿ ಸ್ವಾಧೀನಕ್ಕೆ ಕೊಡಿಸಬೇಕೆಂದು ಅಪ್ಲಿಕೇಷನ್ ಕೊಟ್ಟು ಯಿರುತ್ತಾಳೆ, ಇದರ ಮೇಲೆ ಯೂವ ಆಕ್ಷೇಪಣೆಯಿದ್ದಾಗ್ಯೂ 1887ನೇ ಇಸವಿ ಜನವರೀ 28ನೇ ತಾರೀಖಿಗೆ ಹಿಯರಿಂಗು ಯಿಟ್ಟಿದೆ ಆ ತಾರೀಖು ದಿವಿ 11 ಘಂಟೆದೆ ಈ ಕೋರ್ಟಿಗೆ ಹಾಜರಾಗಿ ತಿಳಿಸಬೇಕು.

1886ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 922.

ವ್ಯತಪಟ್ಟ ಆದಿನಾರಾಯಣಸಾಮಿನಾಯಡು ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಬೆಂಗಳೂರು ಕಲಾಸಿಪಾಳ್ಯದಲ್ಲಿರುವ ಕಂಜಿಲೇಟು ಆದಿ ನಾರಾಯಣಸಾಮಿನಾಯಡು ಹೆಂಡತಿ ತಾಯೋರಮ್ಮ, ಫೂತೀ ಆದಿ ನಾರಾಯಣಸಾಮಿನಾಯಡು ಜಿಂದಗಿಬಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೊಸ್ಕರ 1860ನೇ ಇಸವಿ 27ನೇ ಆಕ್ಟು ಪ್ರಕಾರ ಮೈನರ್ ಜಾನಕೇಶವನಾಯಡಿಗೆ ಗಾರ್ಡಿಯರ್ಆಗಿ ಅರ್ಜೀದಾರಳ ಹೆಸರಿಗೆ ಸರ್ಟಿಫಿಕೇಟ್ ಕೊಡಿಸಬೇಕೆಂದು ಈ ಕೋರ್ಟಿಗೆ ಅರ್ಜೀದಾರಳು ಖಾಯಿಷ್ ಮಾಡುತ್ತಾಳೆ.

ಸದರೀ ದರಖಾಸ್ತನ್ನು 1887ನೇ ಇಸವಿ ಜನವರೀ 28ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಆದಿನಾರಾಯಣಸಾಮಿನಾಯಡು ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿಗೆ ಹಾಜರ್ ಆಗಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ತಾರೀಖು 16ನೇ ಡಿಸೆಂಬರ್ 1886ನೇ ಇಸವಿ.

ಸಿ. ಕ್ರೈಸ್,
ಸಬ್ ಜಡ್ಜ.

## ತುಮಕೂರು ಡಿಸ್ಟ್ರಿಕ್ಟು.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟಿಗೆ ಕೇರಿದ ಈ ಕೆಳಗೆ ಕಂಡ ತಾಲ್ಲೂಕುಗಳಲ್ಲಿರುವ ಸರ್ಕಾರಿ ಜಂಗ್ಲಿಗಳು (ದೇವರಾಯದುರ್ಗ, ಮದ್ದಗಿರಿ, ಹುಲಿಯೂರುದುರ್ಗವೂ ಕೇರಿ) ಅರಗಿನ ಇಜಾರೆಯು ಸ್ 1887—88–1888 89—ಮತ್ತು 1889—90 ಈ ಮೂರು ಸರಕಾರಿ ಸಾಲ್‌ಗಳಿಗಾಗಿ ತುಮಕೂರು ಹೆಡ್ ಕ್ವಾರಟರ್ ಮೊಕ್ಕಾಂನಲ್ಲಿ ಡೆಪ್ಯುಟಿ ಕಮ್ಮಿಷ್ನರ ಸಾಹೇಬರವರ ಆಫೀಸಿನಲ್ಲಿ ಡೆಪ್ಯುಟಿ ಕಮ್ಮಿಷನರವರು ಅಥವಾ ಹಾಜರಿರುವ ಅಸಿಸ್ಟೆಂಟ್ ಕಮ್ಮಿಷನರವರ ಮುಂದೆ 1887ನೇ ಇಸವಿ ಫಿಬ್ರವರಿ ತಾರೀಖು 5ರಲ್ಲು ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತೆ.

| | | | | | |
|---|---|---|---|---|---|
| ತುಮಕೂರು | .. | ಮದ್ದಗಿರಿ | .. | ಚಿಕ್ಕನಾಯಕನಹಳ್ಳಿ |
| ತಿರಾ | .. | ಗುಬ್ಬಿ | .. | ತಿಪಟೂರು |
| ಪಾವಗಡ | .. | ಕುಣಿಗಲ್ | | |

2. ಕೊಡದರಖಾಸ್ತುದಾರನು ಇಜಾರೆಯು ಅವನ ಹೆಸರಿಗೆ ನಿಂತ ಕೂಡ್ಲೆ ವಟ್ಟು ಇಜಾರೆ ಮೊಬಲಗು ಪೈಕಿ ನಾಲ್ಕು ಖಿಸ್ತಿಗೆ ಸಮನಾದ ಮೊಬಲಗನ್ನು ನಗದಾಗಿಯೂಗಲಿ ಕರ್ಬಿಸಿ ನೋಟ್‌ಗಳ ಮೂಲಕವಾಗಲಿ ಡಿಪಾಜಿಟು ಇಡತಕ್ಕದ್ದು ಹಾಗೆ ಇಡುವದಕ್ಕೆ ತಪ್ಪಿದರೆ ಇಜಾರೆಯು ಕೂಡ್ಲೆ ಅವನ ಅವಗುಣಕ್ಕೆ ಹರಾಜ್ ಮಾಡಲ್ಪಟ್ಟು ಹಾಗೆ ಹರಾಜ್ ಮಾಡುವದ್ದರಿಂದ ವುಂಟಾಗಬಹುದಾದ ಯಾವ ನಷ್ಟಕ್ಕಾಗಲಿ ಅವನನ್ನು ಗುರಿಮಾಡಲ್ಪಡುವದು.

3. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ಇಜಾರೆ ಕೆಲಸದ ಮೇಲೆ 1887ನೇ ಇಸವಿ ಏಪ್ರೆಲ್ ಗುರ್ರೆ ತಾರೀಖಿನಲ್ಲಿ ಪ್ರವೇಶಿಸತಕ್ಕದ್ದು ಮತ್ತು ಅವನು ಮೊದಲನೇ ತಿಂಗಳ ಖಿಸ್ತನ್ನು 1887ನೇ ಇಸವಿ ಮೇ 15ನೇ ವುರ್ಮೂಮಿನಲ್ಲಿ ಆಗಲಿ ಯಾ ತಪ್ಪುವರ್ದಲ್ಲಿ ಆಗಲಿ ಪಾವತೀಮಾಡಬೇಕಲ್ಲದೆ ತರುವಾಯದ ಎಲ್ಲಾ ಮಾಹೇವಾರಿ ಖಿಸ್ತುಗಳನ್ನು ಪ್ರತಿ ಮಾರನೇ ತಿಂಗಳು 15ನೇ ತಾರೀಖಿನ ವಳಗಾಗಿ ಪಾವತೀ ಮಾಡತಕ್ಕದ್ದು. ಈ ಬಾಬತು ಮಾಹೇವಾರೀ ಖಿಸ್ತು ಮೊಬಲಗು ಪಾವತೀ ಮಾಡುವದರಲ್ಲಿ ಡಿಪಾಜಿಟ್ ಇಡಲ್ಪಟ್ಟ ಮೊಬಲಗು ಲೆಖ್ಕಕ್ಕೆ ಕೇರಿಸಿಕೊಳ್ಳಲ್ಪಡಲಾರದು. 15ನೇ ತಾರೀಖಿಗೆ ಮಿಾರಿ ಪಾವತೀ ಮಾಡಲ್ಪಡುವ ಖಿಸ್ತು ಮೊಬಲಗಿಗೆ ಸಾಲೀಯಾನಾ ಶೇ ಕಡಾ 6 ರೂಪಾಯಿ ಪ್ರಕಾರ ಪೂರಾ ತಿಂಗಳ ಬಡ್ಡಿಯನ್ನು ತೆಗದುಕೊಳ್ಳಲಾಗುವದು.

4. ಇಜಾರಾದಾರನಿಂದ ಪಾವತೀ ಮಾಡಲ್ಪಡಬೇಕಾದ ಮಾಹೇವಾರಿ ಖಿಸ್ತು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ವಂದಾಣಿಯಂತೆ ಲೋಕಲ್‌ಸೆಸ್ ಥಾರ್ಜ್ ಮಾಡಲ್ಪಡುವದು.

5. ಮೇಲೆ ಕಂಡ ಖಿಸ್ತು ಮೊಬಲಗುಗಳು ಕ್ರಮವಾಗಿ ಯರಡು ತಿಂಗಳು ವರಿಗೆ ಪಾವತಿ ಮಾಡುವದಕ್ಕೆ ತಪ್ಪಿದರೆ ಯಾ ಸಾವಕಾಶವಾದರೆ ಇಜಾರೆಯು ಫೂಟಾಗಿ ರದ್ದು ಮಾಡಲ್ಪಡುವದಕ್ಕೆ ಗುರಿಯಾಗತಕ್ಕದ್ದು. ಮತ್ತು ತಪ್ಪಿಹೋದ ಕಂಟ್ರಾಕ್ಟುದಾರನ ಅವಗುಣಕ್ಕೆ ಇಜಾರೆಯು ಪುನಶ್ಚ ಹರಾಜ್ ಮಾಡಲ್ಪಡುವದಲ್ಲದೆ ಡಿಪಾಜಿಟು ಇಡಲ್ಪಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು, ಸರಕಾರಕ್ಕೆ ಬರತಕ್ಕ ಬಾಕಿ ಮೊಬಲಗನ್ನು ಜಮೀನ್ ಬಾಬಿನ ಬಾಕಿಯಂತೆ ವಸೂಲ್ಮಾಡಲಾಗುವದು.

6 ಜಂಗ್ಲಿಗಳಲ್ಲಿ ತಾನು ಅರಗು ಜಮಾಯಿಸುವಂಥಾ ಮರಗಳನ್ನು ಕಡಿಯುವದಕ್ಕಾಗಲಿ ಸಾಗಿಸುವದಕ್ಕಾಗಲಿ ಅಥವಾ ಊನ ಪಡಿಸುವದಕ್ಕಾಗಲಿ ಅಧಿಕಾರ ವುಂಟಾಗುವದಿಲ್ಲ.

7. ಕಂಟ್ರಾಕ್ಟುದಾರನು ಮಂಜೂರ್ಮಾಡಲ್ಪಟ್ಟ ಇನ್ನಾಂದಾರ್ರುಗಳ ಹಕ್ಕುದಾರಿಗಳಲ್ಲಿ ಪ್ರವೇಶಿಸಕೂಡದು.